**ಅಸಲು ದಾವಾ ನಂ : 418/2017**
**ಪಿ.ಡಬ್ಲ್ಯೂ : 02**

(ಇಂದು ದಿನಾಂಕಃ **11-01-2022** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ- 17 ರಿಂದ 19 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್ ಎಲ್ ಪಿ ರವರಿಂದಃ-**

ನಾನು ಬಿ.ಎ. ಪದವೀ ಧರ. ನನ್ನ ಜನ್ಮ ದಿನಾಂಕಃ **01-06-1993.** ಒಟ್ಟು ಮುಕ್ತ್ಯಾರ ಪತ್ರವನ್ನು ಯಾವ ತಿಂಗಳು ತಾರೀಖು ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಮುಕ್ತ್ಯಾರ ಪತ್ರದಲ್ಲಿ ನನ್ನ ವಯಸ್ಸು **27** ವರ್ಷ ಎಂದು ನಮೂದಿಸಲಾಗಿರುತ್ತದೆ. ಸದರಿ ಮುಕ್ತ್ಯಾರ ಪತ್ರದಲ್ಲಿ ನನ್ನ ವಯಸ್ಸು **28** ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿ **27** ಎಂದು ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-**1** ಒಟ್ಟು ಮುಕ್ತ್ಯಾರ ಪತ್ರವನ್ನು ನನ್ನ ತಾಯಿಯ ಆಸ್ತಿಯನ್ನು ತೆಗೆದುಕೊಳ್ಳುವ ಸಲುವಾಗಿ ಪಡೆದುಕೊಂಡಿರುತ್ತೇನೆ. ಸದರಿ ಒಂದೇ ಕಾರಣಕ್ಕಾಗಿ ಒಟ್ಟು ಮುಕ್ತ್ಯಾರ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಿಪಿ-**1** ಒಟ್ಟು ಮುಕ್ತ್ಯಾರ ಪತ್ರವನ್ನು ಓದಿಕೊಂಡಿರುತ್ತೇನೆ. ಈ ದಾವೆಯನ್ನು ಮಾಡಲು ಯಾರು ಯಾರು ಮಾಹಿತಿಯನ್ನು ಕೊಟ್ಟಿದ್ದಾರೆ ಎಂದು ನನಗೆ ನೆನಪಿಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನನ್ನ ಮಾವ್ ಗುಳು ಕೊಟ್ಟಿರುತ್ತಾರೆ. ಸದರಿ ಮಾವ್ ಗುಳು ಎಂದರೆ ಬುದ್ದಿವಂತ , ಸುರೇಶ, ಮಾರುತಿ , ಮಹಾದೇವ ರವರಾಗಿರುತ್ತಾರೆ. ನನ್ನ ಮತ್ತು ನನ್ನ ತಾಯಿಯ ಆಧಾರ ಕಾರ್ಡ್ ಗಳು ಬೇಡರಹಟ್ಟಿಯಲ್ಲಿ ಇರುತ್ತವೆ. ನಾನು ದುಡಿಮೆ ಮಾಡಲು ಮಹಾಲಿಂಗಪುರಕ್ಕೆ ಹೋಗಿದ್ದೆ. ಸದರಿ ಮಹಾಲಿಂಗ ಪುರದಲ್ಲಿ ನಾನು, ನನ್ನ ತಾಯಿ ಮತ್ತು ನನ್ನ ತಂದೆ ಈ ಮೊದಲು ಇದ್ದೆವು, ಹೀಗ್ಗೆ ಎರಡು ವರ್ಷಗಳ ನಂತರ ಈಗ ಬೇಡರಟ್ಟಿಯಲ್ಲಿ ಇರುತ್ತೇವೆ.

ಸದರಿ ಆಧಾರ ಕಾರ್ಡ್ ಗಳನ್ನು ಈ ಮೊದಲೇ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ನಾವು ಬೇಡರಟ್ಟಿಗೆ ಬಂದ ನಂತರ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಆಧಾರ ಕಾರ್ಡ್ ಮತ್ತು ರೇಶನ್ ಕಾರ್ಡ್ ಗಳನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಮಹಾಲಿಂಗಪುರದಲ್ಲಿ 10 ವರ್ಷಗಳ ಕಾಲ ಇದ್ದೆವು. ಅದಕ್ಕಿಂತ ಮೊದಲು 20 ವರ್ಷಗಳ ಕಾಲ ಮಹಾರಾಷ್ಟ್ರದಲ್ಲಿ ಇದ್ದೆವು. ನನ್ನ ಶಿಕ್ಷಣ ನಮ್ಮ ಊರಿನಲ್ಲಿ ಆಗಿರುತ್ತದೆ. ನನ್ನ ತಾಯಿಯ ವಿವಾಹ ಯಾವ ತಾರೀಖು, ತಿಂಗಳು ಮತ್ತು ವರ್ಷ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಅಕ್ಕಂದಿರು ಇರುತ್ತೇವೆ. ನನ್ನ ತಾಯಿಯ ತಂದೆಯ ಹೆಸರು ರಾಮು, ತಾಯಿಯ ಹೆಸರು ರತ್ನಮ್ಮ. ರಾಮುರವರ ತಂದೆಯ ಹೆಸರು ಬುದ್ದಿವಂತ. ಸದರಿ ಬುದ್ಧಿವಂತರವರು ಎಷ್ಟು ಅಣ್ಣ ತಮ್ಮಂದಿರು ಎಂದು ನನಗೆ ನೆನಪಿಲ್ಲ. ದಾವೆಯಲ್ಲಿ ರಾಮುರವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಎಂದು ಬರೆಯಲಾಗಿರುತ್ತದೆ. ಅದನ್ನು ನಾನು ಓದಿರುತ್ತೇನೆ. ಅದನ್ನು ಓದಿ ಒಂದು ತಿಂಗಳು ಆಗಿರುತ್ತದೆ. ಒಂದು ತಿಂಗಳ ಹಿಂದೆ ಓದಿದ ಬಗ್ಗೆ ನನಗೆ ನೆನಪು ಇರುತ್ತದೆ. ಆದರೆ ವಂಶಾವಳಿಯ ಬಗ್ಗೆ ನೆನಪಿಲ್ಲ. ರಾಮುರವರ ಅಕ್ಕತಂಗಿಯರು ಎಷ್ಟು ಜನ ಇದ್ದಾರೆ ಎಂದು ನನಗೆ ನೆನಪಿಲ್ಲ. ಆದರೆ ರಾಮುರವರ ಅಣ್ಣತಮ್ಮಂದಿರು ಎಷ್ಟು ಜನ ಇದ್ದಾರೆ ಎಂದು ತಿಳಿದಿರುತ್ತದೆ. ಶ್ಯಾಮ್, ಸದಾಶಿವ, ಲಕ್ಷ್ಮಣ್ ರವರು ರಾಮುರವರ ಅಣ್ಣತಮ್ಮಂದಿರಾಗಿರುತ್ತಾರೆ. ರಾಮುರವರಿಗೆ ಎಷ್ಟು ಜನ ಅಕ್ಕತಂಗಿಯರು ಇದ್ದರು ಎಂದು ನನಗೆ ನೆನಪಿಲ್ಲ. ಶ್ಯಾಮ್ ರವರಿಗೆ 4 ಜನ ಮಕ್ಕಳು. ಶ್ಯಾಮ್ ರವರ ಹೆಂಡತಿಯ ಹೆಸರು ರಾಮವ್ವ. ಬುದ್ಧಿವಂತ, ಸುರೇಶ, ಮಾರುತಿ, ಗೋಪಾಲರವರು ಶ್ಯಾಮ್ ರವರ ಮಕ್ಕಳಾಗಿರುತ್ತಾರೆ. ಶ್ಯಾಮ್ ರವರು ರಡ್ಡೆರಟ್ಟಿಯಲ್ಲಿ ತೀರಿಕೊಂಡಿರುತ್ತಾರೆ. ಸದರಿಯವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ಲಕ್ಷ್ಮಣ್ ರವರಿಗೆ ಹೆಂಡತಿ ಮಕ್ಕಳ ಬಗ್ಗೆ ನನಗೆ ನೆನಪಿಲ್ಲ. ದಾವೆಯಲ್ಲಿ ಲಕ್ಷ್ಮಣ್ ರವರ ಹೆಂಡತಿ ಮತ್ತು ಮಕ್ಕಳ ಬಗ್ಗೆ ಬರೆಸಿರುತ್ತೇನೆ.

ಲಕ್ಷ್ಮಣ್ ರವರಿಗೆ ಎಷ್ಟು ಜನ ಮಕ್ಕಳಿದ್ದರು ಎಂದು ನನಗೆ ನೆನಪಿಲ್ಲ. ಸದಾಶಿವರವರಿಗೆ ಎಷ್ಟು ಜನ ಮಕ್ಕಳಿದ್ದರು ಎಂದು ನನಗೆ ನೆನಪಿಲ್ಲ. ಸದಾಶಿವ ಮತ್ತು ಅವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಈ ದಾವೆಯನ್ನು ನಾನೇ ಮಾಡಿರುತ್ತೇನೆ. ಈ ದಾವೆಯನ್ನು ಯಾರ ಮೇಲೆ ಮಾಡಿದೇನೆಂದು ಹೆಸರು ಹೇಳಲು ಬರುವುದಿಲ್ಲ. ಈ ದಾವೆಯಲ್ಲಿ ಯಾವ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ ಎಂದು ನನಗೆ ನೆನಪಿಲ್ಲ. ಬುದ್ದಿವಂತರವರ ವಾರಸುದಾರರ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ತಲಾಟಿರವರಿಂದ ಪಡೆದುಕೊಂಡಿರುತ್ತೇನೆ. ವಾರಿಸಾಗೆ ಸಂಬಂಧಿಸಿದಂತೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂ. **489/2** ಇರುತ್ತದೆ. ಸದರಿ ಆಸ್ತಿಯು **12** ಎಕರೆ ಇರುತ್ತದೆ. ಸದರಿ ಆಸ್ತಿಯ ಪೂರ್ವಕ್ಕೆ ಕೊಣ್ಣೂರು, ಪಶ್ಚಿಮಕ್ಕೆ ಹುಲಿಯಾಳ , ಉತ್ತರಕ್ಕೆ ಕೋತನವರ್, ದಕ್ಷಿಣಕ್ಕೆ ಸವದಿ ರಸ್ತೆ ಇರುತ್ತದೆ. ಸದರಿ ಸವದಿ ರಸ್ತೆ ಎಷ್ಟು ಅಡಿ ಇದೆ ಎಂದು ನನಗೆ ನೆನಪಿಲ್ಲ. ಸದರಿ ಚೆಕ್ಕುಬಂದಿ ಇಲ್ಲದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ **12** ಎಕರೆ ಜಮೀನು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯು **2001** ರಲ್ಲಿ ಯಾರ ಹೆಸರಲ್ಲಿ ಇತ್ತು ಎಂದು ನನಗೆ ನೆನಪಿಲ್ಲ. ಸದರಿ ಆಸ್ತಿಯು **1975** ರಲ್ಲಿ ಯಾರ ಹೆಸರಲ್ಲಿ ಇತ್ತು ಎಂದು ನನಗೆ ನೆನಪಿಲ್ಲ. ಸದರಿ ಆಸ್ತಿಯು ಮೊದಲು ಯಾರ ಹೆಸರಲ್ಲಿ ಇತ್ತು ಎಂದು ನನಗೆ ನೆನಪಿಲ್ಲ. ಪ್ರತಿವಾದಿ ನಂ. **17** ರಿಂದ **19** ರವರು ಯಾರ ಕಡೆಯಿಂದ ಜಮೀನು ಖರೀದಿಗೆ ಪಡೆದುಕೊಂಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಎಷ್ಟು ಹಣಕ್ಕೆ ಖರೀದಿಗೆ ಪಡೆದುಕೊಂಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಯಾವ ತಾರೀಖಿನಂದು ಖರೀದಿಗೆ ಪಡೆದುಕೊಂಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಪ್ರತಿವಾದಿ ನಂ. **17** ರಿಂದ **19** ರವರು ಜಮೀನಿನಲ್ಲಿ ಏನು ಬೆಳೆಯುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯು ಮುಂದುವರೆದು ಸದರಿ ಜಮೀನಿನಲ್ಲಿ ಕಬ್ಬು ಬೆಳೆಯುತ್ತಾರೆ ಎಂದು ನುಡಿಯುತ್ತಾರೆ. ಅ.ದಾ.ನಂ.**330/2000** ದಾವೆಯನ್ನು ಯಾರು ಯಾರ ವಿರುದ್ಧ ದಾಖಲಿಸಿದ್ದರು ಎಂದು ನನಗೆ ನೆನಪಿಲ್ಲ. ಸದರಿ ದಾವೆ ಯಾವ ರೀತಿ ನಿಕಾಲೆಯಾಯಿತು ಎಂದು ನನಗೆ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿ ಆದ ಆದೇಶದಂತೆ ಯಾರ ಹೆಸರು ಉತಾರನಲ್ಲಿ ನಮೂದಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅ.ದಾ.ನಂ.**74/2006** ಹೆಚ್ಚುವರಿ ನ್ಯಾಯಾಲಯ ಅಥಣಿಯಲ್ಲಿ ಚಾಲ್ತಿಯಲ್ಲಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿ ನಂ. **17** ರಿಂದ **19** ರವರು ತಮ್ಮ ಪ್ರತಿವಾದ ಪತ್ರದಲ್ಲಿ ಏನು ಬರೆದ್ದರು ಎಂದು ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲು ಮಾಡಲು ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿರುತ್ತಾರೆ. ನೀಡಲಾಯಿತು.)

**ಮರುವಿಚಾರಣೆಃ** ಇಲ್ಲಾ.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸರಿ. ಇದೆ**

(ನಾಗೇಂದ್ರ)
**3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ. ಎಂ. ಎಫ್. ಸಿ. ನ್ಯಾಯಾಲಯ ಅಥಣಿ.**